ಹಾಗೇ, ಬೇಜವಾಬ್ದಾರಿತನ' ಅಂತ ನಕ್ಕವಳು 'ಅಂದಹಾಗೆ ನೀವೆಲ್ಲಿ ಕೆಲಸಮಾಡೋದು?' ಕೇಳಿದಳು. 'ನನಗೆ ಒಂದು ಕೋಆಪರೇಟಿವ್ ಬ್ಯಾಂಕಲ್ಲಿ ಕೆಲಸ ಸಿಕ್ಕಿದೆ' ತಕ್ಷಣ ಹೊಳೆದದ್ದೊಂದನ್ನು ಹೇಳಿಬಿಟ್ಟಳು. ಹೋಟೆಲಿನಲ್ಲಿ ದಿನಕ್ಕೆ ಸಾವಿರಗಟ್ಟಲೆ ಕೊಟ್ಟು ಇದ್ದರೆ ಒಂದುವಾರದಲ್ಲಿ ಬರಿಗೈಯಾಗಿ ರಸ್ತೆಯೇ ಸಮಸ್ತವಾಗುವುದರ ಅರಿವಿತ್ತು. ಮತ್ತೆ ಮಂಜುಳಾಳ ಸ್ಕೂಟಿಯಲ್ಲೆ ಹೋಟೆಲಿಗೆ ಹೋಗಿ, ರೂಮು ಖಾಲಿಮಾಡಿ ಮಲ್ಲೇಶ್ವರಕ್ಕೆ ಬಂದಳು. ಊಟ ಮಾಡಿ ಮಲಗಿದವಳಿಗೆ ಇದು ಬೆಂಗಳೂರಿನ ಎರಡನೆ ರಾತ್ರಿ. ಬೆಳಿಗ್ಗೆ ಎಚ್ಚರಾದಾಗ ಮಂಜುಳಾ ಆಗಲೇ ಸ್ನಾನ ಮುಗಿಸಿದ್ದಳು. ಸುರಭಿಯ ಸ್ನಾನವಾದ ನಂತರ ಕೆಳಗೆಹೋಗಿ ತಿಂಡಿ ತಿಂದು, ಜಾನಕಮ್ಮ ತುಂಬಿಸಿಟ್ಟ ಟಿಫಿನ್‌ಕ್ಯಾರಿಯರ್ ಎತ್ತಿಕೊಂಡ ಮಂಜುಳಾ, 'ನೀನೂ ಒಂದು ಖರೀದಿಮಾಡು, ಮಧ್ಯಾಹ್ನ ಊಟ ಒಯ್ಯಬಹುದು. ನಾನು ರಾಜಾಜಿನಗರದ ಕಡೆ ಹೊಗತೀನಿ. ನಿಂದೂ ಆ ಕಡೆಯಾದ್ರೆ ಡ್ರಾಪ್ ಮಾಡತೀನಿ' ಅಂದದ್ದಕ್ಕೆ 'ಇಲ್ಲ, ನಂದು ಆ ಕಡೆಯಲ್ಲ. ನೀನು ಹೋಗಿರು, ನಾನು ಸ್ವಲ್ಪ ತಡ' ಅಂದಳು. ಒಂದುಗಂಟೆ ಬಿಟ್ಟು ಮನೆಯಿಂದ ಹೊರಬಿದ್ದವಳು ಸಂಪಿಗೆರಸ್ತೆ ಹಿಡಿದು ನಡೆಯುತ್ತ ಹೋದಳು. ಇರಲು ವ್ಯವಸ್ಥೆಯಾಗಿದ್ದರೂ ತನ್ನ ಹತ್ತಿರವಿರುವ ಹಣ ಎರಡು ತಿಂಗಳಲ್ಲಿ ಖಾಲಿಯಾಗುತ್ತದೆ ಎಂಬ ಸತ್ಯ ಏನಾದರೂ ಮಾಡು ಎನ್ನುವ ಒತ್ತಡ ಹೇರುತ್ತಿತ್ತು. ಆದರೆ, ಇಲ್ಲಿ ಕಣ್ಣುಕಟ್ಟಿ ಕತ್ತಲೆಯಲ್ಲಿ ಬಿಟ್ಟಂತಿದೆ ಸ್ಥಿತಿ. ಮನೆಬಿಟ್ಟು ಇದು ಮೂರನೆದಿನ. ಇಷ್ಟರಲ್ಲಿ ಮನೆಯವರು ಯಾರೋ ಒಬ್ಬರು ತನಗೆ ಫೋನುಮಾಡಿ ಸ್ವಿಚ್‌ಆಫ್ ಸಂದೇಶ ಸಿಕ್ಕಿ ಹುಬ್ಬಳ್ಳಿ ಮಾತಂಗಿಯ ಮನೆಗೆ ಫೋನು ಮಾಡಿರೊ ಸಾಧ್ಯತೆ ಹೊಳೆಯಿತು. ಅಲ್ಲಿಗೆ ಬಂದಿಲ್ಲ ಅಂತ ಗೊತ್ತಾಗಿ ಗಾಬರಿಯಾಗಿ ಪೊಲೀಸ್ ಕಂಪ್ಲೇಂಟು ಕೊಟ್ಟಿದ್ದರೆ? ಮೈ ಜುಮ್ಮೆಂದಿತು. ತಾನು ಈ ನಂಬರು ಬಳಸುವಂತೇ ಇಲ್ಲ. ಒಂದುಕಡೆ ನಿಂತು ಸಿಮ್ ಹೊರತೆಗೆದಳು. ಹೊಸ ನಂಬರು ತಗೋಬೇಕು, ಮಂಜುಳಾ ಹತ್ತಿರ ಅಡ್ರೆಸ್‌ಪ್ರೂಫ್ ಕೇಳಬೇಕು ಅಂದುಕೊಳ್ಳುತ್ತಿರುವಾಗ ಹುಡುಗ ಹುಡುಗಿಯರ ಕಲಕಲ ಗದ್ದಲ ಕೇಳಿಸಿತು. ಗುಂಪುಗುಂಪಾಗಿರುವ ಅವರ ಹಿಂದೆ ಆಚೆಕಡೆ ಕಾಲೇಜು ಕಟ್ಟಡ ಕಾಣಿಸಿತು. ಹುಡುಗಿಯರೆದುರು ದರ್ಶಿನಿಯಲ್ಲಿ ಕಾಫಿ ಕುಡಿಯುತ್ತ, 'ಇಲ್ಲೆಲ್ಲ ಸಿನಿಮಾದ್ದು, ಸೀರಿಯಲ್‌ಗಳದ್ದು ಚಿತ್ರಿಕರಣ ನಡೆಯುತ್ತಾ?' ಕೇಳಿದಳು. ಹುಡುಗಿಯರು ಬೆರಗಿನಿಂದ 'ಇವತ್ತಿಲ್ಲಿ ಶೂಟಿಂಗಿದೆಯಂತಾ?... ಯಾವ ಸಿನಿಮಾದ್ದಂತೆ?...' ಅಂತ ಅತ್ತಿತ್ತ ಹುಡುಕತೊಡಗಿದಾಗ 'ಹಾಗಲ್ಲ, ಸ್ಟುಡಿಯೊ, ಲೊಕೇಶನ್ನು ಅಂತೆಲ್ಲಾ ಇರುತ್ತಲ್ಲ, ಜಾಗ ಚೆನ್ನಾಗಿದೆ ಅದಕ್ಕೆ ಹಾಗೆ ಕೇಳಿದೆ' ಅಂದದ್ದಕ್ಕೆ ಮಾಮೂಲಿಗೆ ತಿರುಗಿ, '...ರಸ್ತೇಲಿ, ಪಾರ್ಕುಗಳಲ್ಲಿ ಯಾವುದೋ ಶೂಟಿಂಗ್ ಮಾಡೋದು ಒಮ್ಮೊಮ್ಮೆ ಕಣ್ಣಿಗೆ ಬೀಳತ್ತಿರುತ್ತೆ. ಅವೆಲ್ಲಾ ಮಾಮೂಲು' ಅಂತ ಮಾತಿಗೆ ಮೊದಲಿಟ್ಟರು. ಕುತೂಹಲಕ್ಕೆ ಎಂಬಂತೆ ಮಾತಾಡುತ್ತಾ ಸ್ಟುಡಿಯೊಗಳಿರುವ ಜಾಗದ ಮಾಹಿತಿ ಹೊರಡಿಸಿದಳು. ರಾತ್ರಿ ಊಟವಾದಮೇಲೆ ಆಫೀಸಿನ ಅನುಭವ ಹೇಗಿತ್ತು ಅಂತ ಮಂಜುಳಾ ಕೇಳಿದ್ದಕ್ಕೆ ಮತ್ತೊಂದು ಸುಳ್ಳು ಹೇಳಬೇಕಾಗಿ ಬಂತು. ಒಂದುಸಾರಿ ಅವಕಾಶ ಸಿಕ್ಕಿಬಿಟ್ಟರೆ ಇದನ್ನೆಲ್ಲ ಲೆಕ್ಕಕ್ಕೆ ತೆಗೆದುಕೊಳ್ಳೋದಿಲ್ಲ. ಇವರೆಲ್ಲ ಫ್ಯಾನುಗಳಾಗಿಬಿಡತಾರೆ ಅಂತ ಸಮಾಧಾನ ಮಾಡಿಕೊಂಡಳು. ಎರಡುದಿನ ಬಿಟ್ಟು ಮಂಜುಳಾ ಹತ್ತಿರ ಚಿಕ್ಕಲಸಂದ್ರಕ್ಕೆ ಹೇಗೆ ಹೋಗೋದು, ಆಫೀಸು ಕೆಲಸವಿದೆ ಅಂತ ವಿಚಾರಿಸಿದ್ದಕ್ಕೆ ದಾರಿಯ ವಿವರ ಸಿಕ್ಕಿತು.

ಬೆಳಿಗ್ಗೆ ಮಂಜುಳಾ ಹೋದನಂತರ ಸಿದ್ಧತೆ ನಡೆಸಿದಳು. ಪಾಚಿಬಣ್ಣದ ಸೀರೆ, ಅದೇಬಣ್ಣದ ಬ್ಲೌಸು ತೊಟ್ಟು ಎಚ್ಚರಿಕೆಯಿಂದ ಮೇಕಪ್ ಮಾಡಿಕೊಂಡು ಕೆಳಗಿಳಿದವಳಿಗೆ ಓಡಾಡುವವರ